ಮಕ್ಕಳಲ್ಲಿ ಪೌರತ್ವದ ಮೌಲ್ಯಗಳನ್ನು ಬೆಳೆಸುವುದು

ರಾಧಿಕಾ ರಾಜ್‌ನಾರಾಯಣ್

ನಾನು ನಾಲ್ಕು ವರ್ಷಗಳ ಕಾಲ (2010-2013) ಚಿಲ್ಡ್ರನ್ಸ್ ಮೂವ್‌ಮೆಂಟ್ ಫಾರ್ ಸಿವಿಕ್ ಅವೇರ್‌ನೆಸ್ (ಸಿ.ಎಂ.ಸಿ.ಎ) ಸಂಸ್ಥೆಯಲ್ಲಿ ಸ್ವಯಂಸೇವಕಿಯಾಗಿದ್ದೆ. ಖಾಸಗಿ ಶಾಲೆಗಳ ನಗರ ಸ್ವಯಂಸೇವಕರಾಗಿ, ಆ ಶಾಲೆಗಳ VIIIನೇ ತರಗತಿಮಕ್ಕಳಿಗೆ ಸಾಪ್ತಾಹಿಕ ತರಗತಿಗಳನ್ನು ತೆಗೆದುಕೊಳ್ಳುವುದು ನಮ್ಮ ಕೆಲಸವಾಗಿತ್ತು. ಇದು ಮಕ್ಕಳು ಸ್ವಯಂಪ್ರೇರಿತರಾಗಿ ಸೇರಿದ್ದ ಕ್ಲಬ್ ಆಗಿತ್ತು. ಸಾಮಾನ್ಯವಾಗಿ 15ರಿಂದ 20 ವಿದ್ಯಾರ್ಥಿಗಳು ಇದರಲ್ಲಿ ಸೇರಿಕೊಳ್ಳುತ್ತಿದ್ದರು. ಅವರಿಗೆ ನಾವು ಪರಿಚಯಿಸುತ್ತಿದ್ದ ಪರಿಕಲ್ಪನೆಗಳೆಂದರೆ:

- ಕಾಳಜಿ: ಆರಂಭದಲ್ಲಿ, ನಮ್ಮ ಸುತ್ತಮುತ್ತಲಿನ ಕುರಿತು, ನೀರು, ವಿದ್ಯುಚ್ಛಕ್ತಿ ಪೋಲು ಮಾಡುವುದು, ಕಸ ಹಾಕುವುದು ಇತ್ಯಾದಿ, ಈ ಎಲ್ಲವುಗಳಲ್ಲಿ ಹೇಗೆ ಬದಲಾವಣೆತರಬೇಕು ಎನ್ನುವ ಕುರಿತು ಪ್ರಾಯೋಗಿಕ ಚಟುವಟಿಕೆಗಳೊಂದಿಗೆ; ನಂತರ ಪರಿಸರ ಮತ್ತು ಬಾಲಕಾರ್ಮಿಕ, ಇತ್ಯಾದಿ ಕುರಿತು.

- ಸಹಬಾಳ್ವೆ: ಹೇಗೆ ಪಕ್ಷಪಾತ ಮತ್ತು ಪೂರ್ವಾಗ್ರಹವನ್ನು ದೂರ ಮಾಡಬೇಕು ಮತ್ತು ವಿವಿಧ ವ್ಯಕ್ತಿಗಳೊಂದಿಗೆ ಹೇಗೆ ಬದುಕಬೇಕು ಎನ್ನುವ ಕುರಿತ ನಡವಳಿಕೆಗಳು.

- ಸಹಕಾರ: ಬದಲಾವಣೆ ತರುವುದಕ್ಕಾಗಿ ಶಾಲೆ ಅಥವಾ ಸ್ಥಳೀಯ ಸರ್ಕಾರಿ ಸಂಸ್ಥೆಗಳು ಮುಂತಾದವುಗಳ ಅಧಿಕಾರಿಗಳ ಜೊತೆ ಹೇಗೆ ವರ್ತಿಸಬೇಕು ಎಂಬ ಚಟುವಟಿಕೆಗಳನ್ನು ಇದು ಒಳಗೊಂಡಿದೆ.

- ಎದುರಿಸುವುದು: ಅಧಿಕಾರಿಗಳಿಗೆ ಸಲ್ಲಿಸಿದ ನಿರಂತರ ಮನವಿ ಮತ್ತು ಪ್ರಾತಿನಿಧಿತ್ವವು ಫಲ ನೀಡದೆ ಇದ್ದಾಗ ಹೇಗೆ ಪ್ರತಿಭಟಿಸಬೇಕು ಮತ್ತು ಅವರನ್ನು ಹೇಗೆ ತಾಳ್ಮೆಯಿಂದ ಎದುರಿಸಬೇಕು ಎನ್ನುವುದನ್ನು ಇದು ಒಳಗೊಂಡಿದೆ.

ಇದರೊಂದಿಗೆ, ಪ್ರಜಾತಾಂತ್ರಿಕತೆಯ ತತ್ವಗಳು, ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ತಿಳಿಸಿಕೊಡಲಾಗುತ್ತದೆ. ಚಟುವಟಿಕೆಗಳು, ಪ್ರಾಯೋಗಿಕ ಉದಾಹರಣೆಗಳು, ಕಥೆಗಳು ಮತ್ತು ಚಲನಚಿತ್ರಗಳು ಇತ್ಯಾದಿಗಳ ಮೂಲಕ ಈ ಎಲ್ಲಾ ಪರಿಕಲ್ಪನೆಗಳನ್ನು ಮಕ್ಕಳಲ್ಲಿ ಮೂಡಿಸಲಾಗುತ್ತದೆ.. ಈ ವಿಚಾರಗಳ ಕುರಿತು ಇತರ ವಿದ್ಯಾರ್ಥಿಗಳಲ್ಲಿ ಜಾಗೃತಿ ರೂಪಿಸುವುದಕ್ಕಾಗಿ, ಮಕ್ಕಳು ಈ ವಿಷಯಗಳ ಕುರಿತು ತಮ್ಮ ಶಾಲೆಗಳಲ್ಲಿ ಪ್ರಚಾರವನ್ನು ಕೈಗೊಳ್ಳುತ್ತಾರೆ.

ಕಾರ್ಯವಿಧಾನ

ಹೆಚ್ಚಿನ ವಿದ್ಯಾರ್ಥಿಗಳಲ್ಲಿ ನಾನು ಕಂಡಸ್ವಭಾವವೆಂದರೆ, ಅವರು ಮಾತನಾಡಲು ಹಿಂಜರಿಯುತ್ತಾರೆ. ಕುಟುಂಬದ ಸದಸ್ಯರು ಮತ್ತು ಶಿಕ್ಷಕರು, ಅವರು 'ತಿರುಗಿಸಿ ಮಾತನಾಡಬಾರದು' ಅಥವಾ ಪ್ರಶ್ನೆಗಳನ್ನು ಕೇಳಬಾರದು ಎಂಬ ಚೌಕಟ್ಟಿನೊಳಗೆ ಮಕ್ಕಳನ್ನು ಬೆಳೆಸಿರುತ್ತಾರೆ ಎನ್ನುವುದು ನನ್ನ ಅನುಭವವಾಗಿದೆ. ಈ ಹಿಂಜರಿಕೆಯಿಂದ ಅವರನ್ನು ಹೊರತರಲು ಅನೇಕ ವಾರಗಳು ಬೇಕಾಯಿತು.

ನಾವು ತಿಳಿಹೇಳಲು ಇಚ್ಛಿಸಿದ್ದ ಪರಿಕಲ್ಪನೆಗಳನ್ನು ಬೋಧಿಸಲು ಯಶಸ್ವಿಯಾದ ವಿಧಾನವೆಂದರೆ, ಈ ಪರಿಕಲ್ಪನೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅವರ ಕುಟುಂಬದ ಸದಸ್ಯರ ಜೊತೆಗೆ ನಿರ್ವಹಿಸಲು ಹೇಳುವುದು. ಉದಾಹರಣೆಗೆ, ಹಲ್ಲುಜ್ಜುವ ವೇಳೆ ನಲ್ಲಿಯನ್ನು ತೆರೆದಿಡದೆ ನೀರನ್ನು ಉಳಿಸುವುದು; ತಮ್ಮೊಳಗೆ, ಅವರ ಕುಟುಂಬದಲ್ಲಿ, ಶಾಲೆಯಲ್ಲಿ ಮತ್ತು ನೆರೆಹೊರೆಯಲ್ಲಿ ಉಂಟಾದ ಬದಲಾವಣೆಯನ್ನು ಬರೆದಿಡಲು ದಿನಚರಿ ಪುಸ್ತಕವನ್ನು ಇಡುವುದು ಇತ್ಯಾದಿ. ಇನ್ನೊಂದು ವಿಧಾನವೆಂದರೆ, ಇದೇ ಪರಿಕಲ್ಪನೆಗಳನ್ನು ಅವರು ಇತರ ಮಕ್ಕಳಿಗೆ ಕಲಿಸುವಂತೆ ಮಾಡುವುದು. ಈ ಅಭ್ಯಾಸವು ಮಗುವಿನ ಮನಸ್ಸಿನಲ್ಲಿ ಚೆನ್ನಾಗಿ ಅಚ್ಚೊತ್ತಿದೆ ಎಂಬುದನ್ನು ನಾನು ಕಂಡುಕೊಂಡೆ. ಆದರೆ ಈ ವಿಧಾನವು ಹಿರಿಯ ವಿದ್ಯಾರ್ಥಿಗಳಿಗಿಂತಲೂ (ಸಿ.ಎಂ.ಸಿ.ಎ ಕ್ಲಬ್ ಸದಸ್ಯರ ಸಹ-ಪಾಠಿಗಳು) ಕಿರಿಯ ವಿದ್ಯಾರ್ಥಿಗಳಲ್ಲಿ ಹೆಚ್ಚು ಪರಿಣಾಮ-ಕಾರಿಯಾಗಿರುತ್ತದೆ.

ಸಮಾನವಯಸ್ಕರ ಒತ್ತಡ

ನಾನು ತರಗತಿಯ ವೇಳೆ ಕಂಡುಕೊಂಡಂತೆ, ಮಕ್ಕಳು 13ನೇ ವಯಸ್ಸಿಗೆ ಕಾಲಿಡುವ ಹೊತ್ತಿಗೆ ಅವರಲ್ಲಿ ಒಳ್ಳೆಯ ಮತ್ತು ಕೆಟ್ಟ ಅಭ್ಯಾಸಗಳೆರಡೂ ಬೆಳೆದು ಬಿಟ್ಟಿರುತ್ತವೆ ಎಂಬುದು ನನ್ನ ನಂಬಿಕೆಯಾಗಿದೆ. ಹದಿಹರೆಯದ ಬಂಡಾಯವೂ ಕಾಣಿಸುತ್ತದೆ. ಉತ್ತಮ ನಾಗರಿಕ ವರ್ತನೆಯ ಸಿದ್ಧಾಂತಗಳನ್ನು ಅವರು ಅನುಸರಿಸುವಂತೆ ಮಾಡುವುದು ತುಂಬಾ ಕಷ್ಟದ ಕೆಲಸ. ಉದಾಹರಣೆಗೆ, ವಾಹನ ಚಾಲನಾ ಪರವಾನಗಿ ಇಲ್ಲದೆ ಅವರು ದ್ವಿಚಕ್ರ ವಾಹನ ಚಲಾಯಿಸಬಾರದು ಎಂದು ಹೇಳುವುದು. ಸಮಾನ-ವಯಸ್ಕರ ಒತ್ತಡ ಮತ್ತು ಆ ಪ್ರಭಾವಿ ಸಣ್ಣ ಪಂಗಡದೊಂದಿಗೆ ಗುರುತಿಸಿಕೊಳ್ಳುವ ಇಚ್ಛೆಯು, ಈ ಉತ್ತಮ ಪೌರತ್ವದ ಮಾರ್ಗದರ್ಶನ ಸೂತ್ರಗಳನ್ನು ನಿರ್ಲಕ್ಷಿಸುವಂತೆ ಮಾಡುತ್ತದೆ. ನನ್ನ ಕೆಲವು ಸಹೋದ್ಯೋಗಿಗಳು, ತಮ್ಮ ಮಕ್ಕಳನ್ನು ಮನವೊಲಿಸಿ, ಪುಸಲಾಯಿಸಿ ಅಥವಾ ಬೆದರಿಸಿ ಅವರು ಕಾನೂನು ಸಮ್ಮತ 18ನೇ ವಯಸ್ಸಿನೊಳಗೆ ಮೋಟಾರು ವಾಹನವನ್ನು ಚಲಾಯಿಸದಂತೆ ಮಾಡುವಷ್ಟರಲ್ಲಿ ಸೋತು ಸುಣ್ಣವಾಗುತ್ತಿದ್ದರು.

ಸಮಾನವಯಸ್ಕರ ಒತ್ತಡವು ಇತರ ಋಣಾತ್ಮಕ ವಿಧಗಳಲ್ಲಿಯೂ ಕೆಲಸ ಮಾಡುತ್ತದೆ. ಸಿ.ಎಂ.ಸಿ.ಎ ಕ್ಲಬ್ಬಿನ ಮಕ್ಕಳು ಅವರ ಕ್ರೀಡಾ ಅಥವಾ ವಾರ್ಷಿಕ ದಿನಾಚರಣೆಯ ಸಂದರ್ಭದಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವ ಬಗ್ಗೆ ಜಾಗೃತಿ ಅಭಿಯಾನವನ್ನು ನಡೆಸಿದರೆ ಇತರ ಸಹಪಾಠಿಗಳು ಅವರನ್ನು ಮೂದಲಿಸುತ್ತಿದ್ದರು. ನಂತರ ಅವರು ತಲೆ ಕೆಳಗೆ ಮಾಡಿ, 'ಓಹ್, ನೀನು ಸಿ.ಎಂ.ಸಿ.ಎ.ಯವನು;

ಕಾಗದದಕಸವನ್ನು ನೀನೇ ಹೆಕ್ಕು' ಎಂದು ಉಳಿದ ಮಕ್ಕಳು ತಮ್ಮನ್ನು ರೇಗಿಸುತ್ತಿದ್ದರು ಎಂದು ನನ್ನ ಬಳಿ ಹೇಳುತ್ತಿದರು.

ಇನ್ನೊಂದು ಅತಿದೊಡ್ಡ ಹಿನ್ನಡೆ ಎಂದರೆ, ಯಾವುದೇ ಸಲಹೆಗಳಿಗೆ ಕೆಲವು ಪೋಷಕರ, ಮುಖ್ಯವಾಗಿ ತಂದೆಯ ಕಟುವಾದ ಪ್ರತಿಕ್ರಿಯೆ. ಮಕ್ಕಳನ್ನು ಪೋಷಕರ ಭೀತಿಯಲ್ಲಿ ಬೆಳೆಸಲಾಗುತ್ತದೆ. ಹೀಗಾಗಿಯೇ ಈ ವಿಷಯವನ್ನು ಇನ್ನೊಮ್ಮೆ ಪ್ರಸ್ತಾಪಿಸಲು ಇವರು ಹಿಂದೇಟು ಹಾಕುತ್ತಾರೆ. ಆದರೆ ಆಳವಾಗಿ ಬೇರೂರಿರುವ ಈ ಅಭ್ಯಾಸಗಳು ಅಥವಾ ಅವರ ಪೋಷಕರು, ಸ್ನೇಹಿತರ ಪ್ರತಿರೋಧದ ನಡುವೆಯೂ, ಸುಮಾರು ಒಂದು ವರ್ಷದ ಅವಧಿಯಲ್ಲಿ ಗಮನಾರ್ಹ ಸಂಖ್ಯೆಯ ವಿದ್ಯಾರ್ಥಿಗಳು ಬದಲಾಗಿದ್ದಾರೆ ಹಾಗು ತಮ್ಮ ಸುತ್ತಲಿನ ಜನರನ್ನು ಸಹ ಬದಲಾಯಿಸಿದ್ದಾರೆ.

ಅಭ್ಯಾಸಗಳನ್ನು ಬದಲಾಯಿಸುವುದು ಮತ್ತು ಸಣ್ಣ ಉಪಕ್ರಮಗಳು

ಬದಲಾವಣೆಯ ಉದ್ದೇಶದಿಂದ ಇಡೀ ಒಂದು ವರ್ಷ ಅವರನ್ನು ಇಷ್ಟು ಸಿದ್ಧಪಡಿಸಿದರೂ, ಶಾಲೆಯ ಡೆಸ್ಕುಗಳಲ್ಲಿ ತಮ್ಮ ಹಸ್ತಾಕ್ಷರ ಗೀಚಿ ಅವುಗಳ ಅಂದಗೆಡಿಸುವುದು, ನೀರು ಪೋಲು ಮಾಡುವುದು ಇತ್ಯಾದಿ ಸಣ್ಣಸಣ್ಣ ಅನಪೇಕ್ಷಿತ ಅಭ್ಯಾಸಗಳು ಒಂದು ಹಂತದಲ್ಲಿ ಹತಾಶೆಯತ್ತ ತಳ್ಳಿದವು. ಒಂದು ದಿನ ನಾನು ಸಂಪೂರ್ಣವಾಗಿ ವಿಫಲಳಾಗಿದ್ದೇನೆ ಎಂದು ನಿರಾಶೆಯಿಂದ ಹೊರನಡೆದಾಗ, ಸಿ.ಎಂ.ಸಿ.ಎ ಕ್ಲಬ್ಬಿನ ಕೆಲವು ಮಕ್ಕಳು ನನ್ನ ಹಿಂದೆ ಓಡಿ ಬಂದರು. 'ಮೇಡಂ, ಶಾಲೆಯ ಪಕ್ಕದಲ್ಲಿ ಒಂದು ಮನೆ ಇದ್ದು ಅಲ್ಲಿ ಕೊಳವೆಯಿಂದ ಸಾಕಷ್ಟು ನೀರು ಹರಿದು ಹೋಗುತ್ತಿದೆ. ನಾವು ಅಲ್ಲಿಗೆ ಹೋಗಿ ಏನಾದರೂ ಮಾಡಲು ಅವರಿಗೆಹೇಳೋಣವೇ?' ಹೀಗಂದಾಗ, ನನ್ನ ಕಣ್ಣುಗಳನ್ನು ನನಗೇ ನಂಬಲಾಗಲಿಲ್ಲ. 'ಹೌದು, ಖಂಡಿತವಾಗಿಯೂ. ಆದರೆ ಸಭ್ಯತೆಯಿಂದ ವರ್ತಿಸಿ ಹಾಗು ಒಟ್ಟಿಗೆ ಹೋಗಿ' ಎಂದು ನಾನು ಅವರಿಗೆ ಹೇಳಿ ಅವರು ವಾಪಸ್ ಬರುವ ತನಕ ಕಾದು ನಿಂತೆ. ಹತ್ತು ನಿಮಿಷಗಳಲ್ಲಿ, ನೀರು ಹರಿಯುವುದು ನಿಂತಿರುವುದನ್ನು ಮತ್ತು ಮಕ್ಕಳು ಗೆಲುವಿನ ನಗೆ ಬೀರಿ ವಾಪಸ್ ಬರುತ್ತಿರುವುದನ್ನು ನಾನು ಗಮನಿಸಿದೆ. ಸಾಕಷ್ಟು ಉತ್ಸಾಹದಿಂದ, ಅಲ್ಲಿ ಏನು ನಡೆಯಿತು ಎಂಬುದನ್ನು ಅವರು ನನಗೆ ವಿವರಿಸಿದರು. ಮಾಲೀಕರು ಪಂಪ್‌ನ ಸ್ವಿಚ್ ಆನ್ ಮಾಡಿ ಎಲ್ಲೋ ಹೋಗಿದ್ದರು. ಆದರೆ ಅದೃಷ್ಟವಶಾತ್ ಅಲ್ಲಿನ ವಾಚ್‌ಮನ್ ಸ್ಥಳದಲ್ಲೇ ಇದ್ದರು ಹಾಗು ಆ ವಾಚ್‌ಮನ್‌ನ ಮನವೊಲಿಸಿ ಪಂಪ್‌ನ ಸ್ವಿಚ್ ಅನ್ನು ಆಫ್ ಮಾಡಿಸುವಲ್ಲಿ ಅವರು ಯಶಸ್ವಿಯಾದರು. ಇದು ತುಂಬಾ ಸಾಮಾನ್ಯ ಘಟನೆಯಾಗಿದ್ದರೂ, ಯುವ ನಾಗರಿಕರಾಗಿ ಹೆಚ್ಚು ಸಕ್ರಿಯರಾಗಿ ವರ್ತಿಸಬೇಕಾದ ಅಗತ್ಯತೆಯನ್ನು ಪ್ರಚೋದಿಸಲು ಇಷ್ಟು ಸಾಕಾಗಿತ್ತು.

ಇಂತಹ ಸಣ್ಣ ಉಪಕ್ರಮಗಳ ಮೂಲಕ ಬದಲಾವಣೆಯನ್ನು ತಂದ ಅನೇಕ ಇತರ ಉದಾಹರಣೆಗಳೂ ಇವೆ.

ವಿವಾಹ ಕಾರ್ಯಕ್ರಮವೊಂದರಲ್ಲಿ, ಊಟದ ನಂತರ ಜನರು ತಮ್ಮ ಕೈ ತೊಳೆದು ನಲ್ಲಿಯನ್ನು ಮುಚ್ಚದೆ ಹಾಗೆಯೇ ಬಿಟ್ಟು ಹೋಗುತ್ತಿರುವುದನ್ನು ವಿಮಲಾ ಗಮನಿಸಿದಳು. ಅವಳು ಅಲ್ಲೇ ನಿಂತಳು ಹಾಗು ನಲ್ಲಿಯನ್ನು ಬಳಸಿದ ನಂತರ ಅದನ್ನು ಮುಚ್ಚಿ ಹೋಗುವಂತೆ ಎಲ್ಲರನ್ನು ವಿನಂತಿಸಿದಳು.

ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸುವಂತೆ ತನ್ನ ತಂದೆಯ ಮನವೊಲಿಸುವಲ್ಲಿ ಭಾವನಾ ಯಶಸ್ವಿಯಾದಳು.

ವಾಹನ ಚಾಲನಾ ಪರವಾನಗಿ ಪಡೆಯುವ ತನಕ ಸ್ಕೂಟರ್ ಚಲಾಯಿಸದಂತೆ ತನ್ನ ಅಕ್ಕನನ್ನು ಮನವೊಲಿಸುವಲ್ಲಿ ಶ್ರುತಿ ಯಶಸ್ವಿಯಾದಳು.

ತನ್ನ ಗೆಳತಿ ಬಾಲ್ಕನಿಯಿಂದ ಕಾಗದದ ತ್ಯಾಜ್ಯಗಳನ್ನು ಎಸೆಯುತ್ತಿರುವುದನ್ನುಬೀಬಿ ನಾಜ್ ನೋಡಿದಳು. ಅದನ್ನು ಆಕೆ ಆಯ್ದುಕೊಂಡು ತನ್ನ ಗೆಳತಿ ಬಳಿ ಹೋಗಿ ಹಿಂದಿರುಗಿಸಿದಳು ಮತ್ತೆ ಅದನ್ನು ಬಿಸಾಡದಂತೆ ನೋಡಿಕೊಂಡಳು.

ಅಬ್ದುಲ್ ಇಡೀ ರಾತ್ರಿ ತನ್ನ ಫೋನ್‌ಅನ್ನು ಚಾರ್ಜ್ ಮಾಡುವುದನ್ನು ನಿಲ್ಲಿಸಿದ ಹಾಗು ಇದೇ ರೀತಿ ಮಾಡುವಂತೆ ತನ್ನ ಪೋಷಕರಿಗೂ ಮನವೊಲಿಸಿದ. ಈ ವಿಧಾನಹಾಗು ವಿದ್ಯುತ್ ಉಳಿಸುವ ಇತರ ವಿಧಾನಗಳನ್ನು ಅಳವಡಿಸುವ ಮೂಲಕ ಅನೇಕ ವಿದ್ಯಾರ್ಥಿಗಳು ತಮ್ಮ ಮಾಸಿಕ ವಿದ್ಯುಚ್ಛಕ್ತಿ ಬಿಲ್‌ನಲ್ಲಿ ಸುಮಾರು ರೂ.300ರಷ್ಟು ಉಳಿತಾಯ ಮಾಡಿದರು!

ಒಂದು ಮಗುವನ್ನು ಕೆಲಸಕ್ಕೆ ಇಟ್ಟಿರುವುದನ್ನು ಹಾಗು ಆ ಮಗುವಿಗೆ ಥಳಿಸುತ್ತಿರುವುದನ್ನು ಕೀರ್ತಿ ಗಮನಿಸಿದಳು. ತನಗೆ ನೆನಪಿದ್ದ ಮಕ್ಕಳ ಸಹಾಯವಾಣಿ ಸಂಖ್ಯೆಗೆ ಆಕೆ ಕರೆ ಮಾಡಿದಳು ಹಾಗು ಅಧಿಕಾರಿಗಳು ಆ ಮಗುವನ್ನು ರಕ್ಷಿಸಿದಾಗ ಆಕೆಯ ಖುಶಿಗೆ ಪಾರವೇ ಇರಲಿಲ್ಲ.

ಕೋಮಲ್ ತನ್ನ ತಾಯಿಯ ಶಾಪಿಂಗ್‌ಗಾಗಿ ಬಟ್ಟೆಯ ಚೀಲವನ್ನು ಹೊಲಿದಳು. ತನ್ನ ಮಗಳ ನೈಪುಣ್ಯತೆಯ ಬಗ್ಗೆ ತಾಯಿಯು ಅಭಿಮಾನಪಟ್ಟರು ಮಾತ್ರವಲ್ಲದೆ ಅವರು ಶಾಪಿಂಗ್‌ಗೆ ಹೋಗುವಾಗ ಅದೇ ಚೀಲವನ್ನು ಬಳಸಿದರು. ಹೀಗೆ ಕೋಮಲ್ ಕನಿಷ್ಠ ಒಬ್ಬ ವ್ಯಕ್ತಿಯಾದರೂ ಪ್ಲಾಸ್ಟಿಕ್ ಚೀಲಗಳನ್ನು ಬಳಸುವುದನ್ನು ಪರಿಣಾಮಕಾರಿಯಾಗಿ ತಡೆದಳು.

ಗಣೇಶನ ಮೂರ್ತಿಗಳಲ್ಲಿ ಬಳಸುವ ವಿಷಕಾರಿ ಬಣ್ಣಗಳು ನೀರಿನ ಮೇಲೆ ಬೀರುವ ದುಷ್ಪರಿಣಾಮಗಳಿಂದ ಚಿಂತಿತಳಾಗಿದ್ದ ಸ್ವಾತಿ, ಗಣೇಶ ಹಬ್ಬದ ಸಂದರ್ಭದಲ್ಲಿ ಆವೆಮಣ್ಣಿನ ಮೂರ್ತಿಯನ್ನು ಬಳಸಿದಳು ಹಾಗು ಒಂದು ಬಕೆಟ್ ನೀರಿನಲ್ಲಿ ಈ ಮೂರ್ತಿಯನ್ನು ವಿಸರ್ಜಿಸಿದಳು ಮತ್ತು ನೀರನ್ನು ಉದ್ಯಾನವನಕ್ಕೆ ಬಳಸಿದಳು.

ಸಂತೋಷ್ ಒಂದು ರಟ್ಟಿನ ಪೆಟ್ಟಿಗೆಯನ್ನು ಬಳಸಿಕೊಂಡು, ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ವಿತರಿಸಿದ ಚಾಕಲೇಟ್ ಪೇಪರ್‌ಗಳನ್ನು ಸಂಗ್ರಹಿಸಿದನು.

ಅನಿಲ್ ಮನೆಗೆ ಹೋಗುವಾಗ, ಇಬ್ಬರು ವ್ಯಕ್ತಿಗಳು ಪ್ಲಾಸ್ಟಿಕ್ ಚೀಲದಲ್ಲಿ ತ್ಯಾಜ್ಯವನ್ನು ಕೊಂಡೊಯ್ಯುತ್ತಿರುವುದನ್ನು ಗಮನಿಸಿದ. ಅವರು ಆ ತ್ಯಾಜ್ಯವನ್ನು ಕಾಲುದಾರಿಯ ಬಳಿ ಎಸೆಯುವವರಿದ್ದರು. 'ಇದು ನಿಮ್ಮದೇ ನಗರ, ಈ ರೀತಿ ಮಾಡಬೇಡಿ' ಎಂದು ಧೈರ್ಯದಿಂದ ಹೇಳಿದ ಅನಿಲ್, ಅವರು ತ್ಯಾಜ್ಯವನ್ನು ಬಿಸಾಡದಂತೆ ತಡೆದ. ಅವರು ಬೆದರುತ್ತಾ ತ್ಯಾಜ್ಯದೊಂದಿಗೆ ವಾಪಸ್ ಹೋದರು. ಈ ಯಶಸ್ಸಿನಿಂದ ಪುಳಕಿತನಾದ ಅನಿಲ್, ಅನೇಕ ಜನರು ರಸ್ತೆಯಲ್ಲಿ ಕಸ ಬಿಸಾಡದಂತೆ ತಡೆದ.

ಸಾಕಷ್ಟು ವಾಹನಗಳು ವೇಗದಲ್ಲಿ ಸಾಗುವ, ಶಾಲೆಯ ಹೊರಗಿನ ರಸ್ತೆಯಲ್ಲಿವೇಗನಿಯಂತ್ರಕಗಳನ್ನು ಮತ್ತು ಎಚ್ಚರಿಕೆ ಫಲಕಗಳನ್ನು ಹಾಕಿಸಿದ್ದು, ಬಹುಶಃ ಸಿ.ಎಂ.ಸಿ.ಎ ಕ್ಲಬ್ ಸದಸ್ಯರ ಅತಿದೊಡ್ಡ ಸಾಧನೆ. ಇದಕ್ಕಾಗಿ ಇವರು ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್ ಅವರ ಮನವೊಲಿಸಬೇಕಾಯಿತು. 'ಮಕ್ಕಳಾದ ನೀವೇ ದ್ವಿಚಕ್ರ ವಾಹನಗಳನ್ನು ವೇಗವಾಗಿ ಚಲಾಯಿಸುತ್ತೀರಿ' ಎಂದು ಈ ಇನ್ಸ್‌ಪೆಕ್ಟರ್ ಹೇಳಿದಾಗ, 'ಇಲ್ಲ ಸರ್, ನಾವು ಸಿ.ಎಂ.ಸಿ.ಎ ಸದಸ್ಯರು. ನಾವು ದ್ವಿಚಕ್ರ ವಾಹನಗಳನ್ನು ಚಲಾಯಿಸುವುದಿಲ್ಲ. ಏಕೆಂದರೆ ನಮ್ಮ ಬಳಿ ವಾಹನ ಚಾಲನಾ ಪರವಾನಗಿ ಇಲ್ಲ' ಎಂದು ಅಭಿಮಾನದಿಂದ ಹೇಳಿದರು. ಈ ವಿಷಯವನ್ನು ಕೇಳಿದ ನಂತರ ನನ್ನ ಅಭಿಮಾನ ದುಪ್ಪಟ್ಟಾಯಿತು. ವೇಗನಿಯಂತ್ರಕಅಳವಡಿಸಬೇಕಾದರೆ ಪುರಸಭೆ ಅಧಿಕಾರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ)ಯ ಜೊತೆ ಚರ್ಚಿಸಬೇಕಿತ್ತು. ಅವರು ಕನ್ನಡದಲ್ಲಿ ಸುಂದರವಾಗಿ ಅರ್ಜಿಯನ್ನು ಬರೆಯಲು ಕಲಿತರು. ಇದಕ್ಕೆ ಇವರಿಗೆ ಅಧಿಕಾರಿಯ ಶ್ಲಾಘನೆಯೂ ವ್ಯಕ್ತವಾಯಿತು. ಅಲ್ಲದೆ ವೇಗನಿಯಂತ್ರಕಗಳನ್ನು ಅಳವಡಿಸುವ ತನಕ ಅಧಿಕಾರಿಯನ್ನು ವಿನಂತಿಸಲು ಅವರ ಕಚೇರಿಗೆ ಪದೇಪದೇ ಭೇಟಿ ನೀಡಿದರು.

ನಾನು ಈ ಹಿಂದೆಯೇ ಉಲ್ಲೇಖಿಸಿದಂತೆ, ಆಹಾರವನ್ನು ಹಾಳು ಮಾಡದೆ ಇರುವುದು, ಎಲ್ಲೆಂದರಲ್ಲಿ ಕಸ ಬಿಸಾಡದೆ ಇರುವುದು, ಮುಂತಾದ ಸಾಮಾನ್ಯ ವಿಚಾರಗಳಲ್ಲಿ ಈ ಎಳೆಯ, ಸಕ್ರಿಯ ನಾಗರಿಕರು ಪ್ರಾಥಮಿಕ ಶಾಲಾ ಮಕ್ಕಳಿಗೆ ಮಾರ್ಗದರ್ಶನ ನೀಡಲು ಪ್ರಾರಂಭಿಸಿದಾಗ, ಹಿರಿಯ ಮಕ್ಕಳಿಗಿಂತಲೂ ಈ ಮಕ್ಕಳಲ್ಲಿ ಅತ್ಯುತ್ತಮ ಮತ್ತು ಶೀಘ್ರ ಫಲಿತಾಂಶ ಬರುತ್ತದೆ ಎಂಬುದನ್ನು ಗಮನಿಸಿದೆ. ಎಳೆಯ ಮಗುವೊಂದು ಇನ್ನೊಬ್ಬ ಮಗುವಿಗೆ, 'ಹೇಯ್, ಕಸದಬುಟ್ಟಿಯ ಹೊರಗಡೆ ನಿನ್ನ ಪೆನ್ಸಿಲ್‌ಅನ್ನು ಮೊನಚು ಮಾಡಬೇಡ, ನೆಲವು ಕೊಳೆಯಾಗುತ್ತದೆ. ಪೆನ್ಸಿಲ್‌ಅನ್ನು ಯಾವ ಸ್ಥಳದಲ್ಲಿ ಮೊನಚು ಮಾಡಬೇಕು ಎಂಬುದನ್ನು ಅಕ್ಕ ಹೇಳಿದ್ದು ನೀನು ಕೇಳಿಸಿಕೊಳ್ಳಲಿಲ್ಲವೇ?' ಎಂದು ಹೇಳಿದ್ದನ್ನು ನಾನು ಕೇಳಿಸಿಕೊಂಡೆ. ಶಿಕ್ಷಕರು ಮತ್ತು ಹಿರಿಯರನ್ನು ಆರಾಧಿಸುವ ಮತ್ತು ಅವರು ಹೇಳಿದಂತೆ ಮಾಡುವ ಎಳೆಯ ಮಕ್ಕಳ ಈ ಪ್ರವೃತ್ತಿಯು, ಉತ್ತಮ ಪೌರತ್ವದ ಮೌಲ್ಯಗಳನ್ನು ಬಿತ್ತುವ ಜೊತೆಗೆ ಅನುಕೂಲಕರ-ವಾಗಿಯೂ ಕೆಲಸ ಮಾಡುತ್ತದೆ.

ಚಾರ್ಲ್ಸ್‌ಕಿಂಗ್ಸ್ಲಿ ಅವರ 'ವಾಟರ್ ಬೇಬೀಸ್'ನಿಂದ ಪಡೆದ ಒಂದು ಮೂಲಭೂತ ಪರಿಕಲ್ಪನೆಯನ್ನು ಕೇಂದ್ರಬಿಂದುವಾಗಿ ಪರಿಗಣಿಸ-ಬಹುದಾಗಿದೆ: 'ಇತರರು ನಿಮ್ಮ ಜೊತೆ ಹೇಗೆ ವರ್ತಿಸಬೇಕು ಎಂದು ನೀವು ಇಚ್ಛಿಸುತ್ತೀರೊ, ನೀವೂ ಅದೇ ರೀತಿ ಮಾಡಿ.' ಉದಾಹರಣೆಗೆ, ಒಂದು ವೇಳೆ ಬೇರೆ ಯಾರಾದರೂ ಶೌಚಾಲಯವನ್ನು ಹೊಲಸು ಮಾಡಿ ಹಾಗೆಯೇ ಬಿಟ್ಟರೆ ಅಥವಾ ಗೇಟ್‌ನ ಹೊರಗಡೆ ತ್ಯಾಜ್ಯವನ್ನು ಬಿಸಾಡಿದರೆ ನಿಮಗೆ ಹೇಗೆ ಅನಿಸುತ್ತದೆ ಎಂದು ಕೇಳಿ. ಕ್ರಿಯೆಗಳ ಕುರಿತು ಪರ್ಯಾಲೋಚನೆ ಮಾಡುವಂತೆ ಪ್ರೇರೇಪಿಸಬೇಕು. ಎಳೆಯ ಮಕ್ಕಳು ಮನಃ-ಪೂರ್ವಕವಾಗಿ ಮಾಡಬಹುದಾದ ಮತ್ತು ಶಾಲೆಯಲ್ಲಿ ಶಿಕ್ಷಕರು ಚರ್ಚಿಸಬಹುದಾದ ಕೆಲವು ಸರಳ ಚಟುವಟಿಕೆಗಳನ್ನು ಈ ಕೆಳಗೆ ನೀಡಲಾಗಿದೆ:

- ಹಲ್ಲುಜ್ಜುವಾಗ ನಲ್ಲಿಯನ್ನು ಮುಚ್ಚುವುದು (ಮತ್ತು ಕುಟುಂಬದ ಇತರ ಸದಸ್ಯರಿಗೂ ಇದೇ ರೀತಿ ಮಾಡಲು ಹೇಳುವುದು).
- ಮನೆಯಲ್ಲಿ ಅನಗತ್ಯವಾಗಿ ತಿರುಗುತ್ತಿರುವ ಫ್ಯಾನ್‌ಗಳು ಅಥವಾ ಉರಿಯುತ್ತಿರುವ ದೀಪಗಳನ್ನು ಆರಿಸುವುದು.
- ರಾತ್ರಿಯಿಡೀ ಎಲೆಕ್ಟ್ರಾನಿಕ್ ಉಪಕರಣಗಳನ್ನು ಚಾರ್ಜ್ ಮಾಡದಂತೆ ಹಿರಿಯ ಸಹೋದರ-ಸಹೋದರಿಯರು ಮತ್ತು ಪೋಷಕರನ್ನು ವಿನಂತಿಸುವುದು.
- ತ್ಯಾಜ್ಯವನ್ನು ಪ್ರತ್ಯೇಕಿಸಿ ಪುರಸಭೆಯ ಕಾರ್ಮಿಕರಿಗೆ ಹಸ್ತಾಂತರಿಸುವುದು ಹಾಗು ಯಾವ ಕಾರಣಕ್ಕೂ ಇದನ್ನು ಬೀದಿಯಲ್ಲಿ ಅಥವಾ ಖಾಲಿ ನಿವೇಶನದಲ್ಲಿ ಎಸೆಯದಂತೆ ನೋಡಿಕೊಳ್ಳುವುದು.
- ಸಿಹಿತಿಂಡಿಗಳ ಅಥವಾ ಸ್ನ್ಯಾಕ್ಸ್‌ಗಳ ಹೊದಿಕೆಗಳನ್ನು ಬೀದಿಯಲ್ಲಿ ಅಥವಾ ನೆಲದ ಮೇಲೆ ಬಿಸಾಡದೆ ಇರುವುದು; ಕಸದ ಬುಟ್ಟಿಯಲ್ಲಿಯೇ ಅವುಗಳನ್ನು ಹಾಕುವುದು.
- ಮನೆಗೆಲಸದವರು ಮತ್ತು ಪುರಸಭೆ ಕಾರ್ಮಿಕರು ಸೇರಿದಂತೆ ಎಲ್ಲರ ಜೊತೆ ಗೌರವದಿಂದ ಮಾತನಾಡುವುದು.
- ಬೇಸಿಗೆ ಕಾಲದಲ್ಲಿ ಹಕ್ಕಿಗಳಿಗಾಗಿ ಒಂದು ಸಣ್ಣತಟ್ಟೆಯಲ್ಲಿ ನೀರನ್ನು ಇಡುವುದು.
- ಶಾಪಿಂಗ್‌ಗಾಗಿ ಪೋಷಕರು ಮನೆಯಿಂದ ಹೊರ ಹೋಗುವಾಗ ಅವರು ಚೀಲವನ್ನು ತೆಗೆದುಕೊಂಡು ಹೋಗುವಂತೆ ನೆನಪಿಸುವುದು. ಇದನ್ನು ಕೋವಿಡ್‌ಗೆ ತಕ್ಕುದಾದ ಅಭ್ಯಾಸಕ್ಕೂ ವಿಸ್ತರಿಸಬಹುದು. ಮನೆಯಿಂದ ಹೊರಹೋಗುವ ಮೊದಲು ಎಲ್ಲರೂ ಮುಖಗವುಸನ್ನು ಧರಿಸುವಂತೆ ನೆನಪಿಸುವುದು, ಮನೆಗೆ ಮರಳಿದ ನಂತರ ಕೈಗಳನ್ನು ಸಾಬೂನಿನಿಂದ ತೊಳೆಯುವುದು ಇತ್ಯಾದಿಗಳನ್ನು ಸೇರ್ಪಡೆಗೊಳಿಸಬಹುದು.
- ವಾಹನ ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸದಂತೆ ಹಾಗು ದ್ವಿಚಕ್ರ ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ತಮಗಿಂತ ಹಿರಿಯ ಸಹೋದರ-ಸಹೋದರಿಯರಿಗೆ ವಿನಂತಿಸುವುದು.

ಇಂತಹ ಅನೇಕ ಚಟುವಟಿಕೆಗಳನ್ನು ಕುರಿತು ಯೋಚಿಸಬಹುದು. ಅಲ್ಲದೆ ಎಳೆಯ ಮಕ್ಕಳು ತಾವಾಗಿಯೇ ಅಭಿವ್ಯಕ್ತಿಗೊಳಿಸಲು ಹಾಗು ತಮ್ಮ ಅನುಭವಗಳ ಕುರಿತು ಮಾತನಾಡಲು ಉತ್ತೇಜಿಸಿದರೆ, ಅವರು ಮಾಧ್ಯಮಿಕ ಶಾಲೆಗೆ ತಲುಪಿದ ಮೇಲೆ ಇದು ಅವರಲ್ಲಿ ಇನ್ನಷ್ಟು ಆತ್ಮವಿಶ್ವಾಸವನ್ನು ತುಂಬುತ್ತದೆ. ಈ ಎಳೆಯ ಮಕ್ಕಳು ಹದಿಹರೆಯವನ್ನು ತಲುಪುವ ಹೊತ್ತಿಗೆ, ಸರಿಯಾದ ದಿಶೆಯಲ್ಲಿರುವ ಪೌರತ್ವದ ವರ್ತನೆಗಳು ಮತ್ತು ಅಭ್ಯಾಸಗಳು ಅವರಲ್ಲಿ ಭದ್ರವಾಗಿ ಬೇರೂರಿರುತ್ತವೆ.

***ಮಕ್ಕಳ ಗುರುತನ್ನು ಕಾಪಾಡುವ ಉದ್ದೇಶದಿಂದ ಹೆಸರುಗಳನ್ನು ಬದಲಾಯಿಸಲಾಗಿದೆ.**



ರಾಧಿಕಾ ರಾಜ್‌ನಾರಾಯಣ್ ಅವರು ಎಂಡೋಕ್ರೈನೋಲಜಿಯಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ವ್ಯವಹಾರ ನಿರ್ವಹಣೆಯಲ್ಲಿ ಡಿಪ್ಲೊಮಾವನ್ನು ಪಡೆದಿದ್ದಾರೆ. ಅವರು ರಾ ಡೆಲ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಹಸಂಸ್ಥಾಪರು ಮತ್ತು ನಿರ್ದೇಶಕರು (ಸೇಲ್ಸ್ ಮತ್ತು ಮಾರ್ಕೆಟಿಂಗ್) ಆಗಿದ್ದಾರೆ. ಅವರು ಪೌರ ವಿಚಾರಗಳ ಕುರಿತು ಹಾಗು ಎಳೆಯ ಮಕ್ಕಳಲ್ಲಿ ಪೌರತ್ವದ ಮೌಲ್ಯಗಳನ್ನು ಬಿತ್ತುವ ವಿಚಾರದಲ್ಲಿ ಸಾಕಷ್ಟು ಆಸಕ್ತಿ ಹೊಂದಿದ್ದಾರೆ. ರಾಧಿಕಾ ಅವರು ಭಾರತೀಯ ಶಾಸ್ತ್ರೀಯ ಸಂಗೀತ ಹಾಡುಗಾರ್ತಿಯೂ ಆಗಿದ್ದಾರೆ. ಹಿರಿಯ ವೀಣಾವಾದಕರೂ ಆಗಿರುವ ಇವರು, ಅನೇಕ ಸಂಗೀತ ಕಚೇರಿಗಳಲ್ಲಿ, ರೇಡಿಯೋ ಮತ್ತು ಟಿ.ವಿಯಲ್ಲಿ ತನ್ನ ಕಾರ್ಯಕ್ರಮವನ್ನು ನೀಡಿದ್ದಾರೆ. ಹಿರಿಯರ ಆರೈಕೆಯಲ್ಲಿ ಪರಿಣತಿ ಹೊಂದಿರುವ ಇವರು, ಈ ಕ್ಷೇತ್ರದಲ್ಲಿ ಎರಡು ದಶಕಗಳ ಸಮೃದ್ಧ ಅನುಭವವನ್ನು ಹೊಂದಿದ್ದಾರೆ. ಅವರನ್ನು radhika.r2@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** । ಪರಿಶೀಲನೆ: **ಲತಾ ಕೆ.ಸಿ.**